# ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ, ಬೆಂಗಳೂರು

ಎಚ್.ಆರ್.ಸಿ. ಸಂ: 3011/10/31/2020

ದಿನಾಂಕ: 19ನೇ ಮಾರ್ಚ್, 2021

ಉಪಸ್ಥಿತರು:

**ಶ್ರೀ ಕೆ. ಬಿ. ಚಂಗಪ್ಪ**

ಗೌರವಾನ್ವಿತ ಸದಸ್ಯರು

ದೂರುದಾರರು: ಶ್ರೀ ಕೆ. ಎಂ. ಮುನಿಯಪ್ಪ,
ನಂ.101, ಮೊದಲನೇ ಮಹಡಿ, ಶ್ರೀ ಮಂಜುನಾಥ ನಿಲಯ,
ಅಣ್ಣಪ್ಪ ರೆಡ್ಡಿ ಲೇಔಟ್, ಆಂಥೋನಿ ಸ್ಕೂಲ್ ರಸ್ತೆ,
ರಾಮಮೂರ್ತಿನಗರ, ಬೆಂಗಳೂರು

## ಆದೇಶ

1. ಈ ದೂರರ್ಜಿಯನ್ನು ಕೆ.ಆರ್.ಪುರಂ ಪೊಲೀಸ್ ಠಾಣೆಯ ಪೊಲೀಸರ ಮೇಲೆ ಕ್ರಮ ಕೈಗೊಳ್ಳುವ ಸಲುವಾಗಿ ಸಲ್ಲಿಸಲಾಗಿರುತ್ತದೆ.

2. ದೂರುದಾರರ ಬಾಡಿಗೆದಾರರಾದ ಶ್ರೀ ಮಂಜು ಮತ್ತು ಅವರ ಹೆಂಡತಿ ಶ್ರೀಮತಿ ಅನಿತ ರವರು ದೂರುದಾರರಿಗೆ ಬಾಡಿಗೆ ಹಣವನ್ನು ನವೆಂಬರ್ 2019 ರಿಂದ ನೀಡದೇ ಇದ್ದು, ಅದನ್ನು ಕೇಳಿದಕ್ಕೆ ಇಬ್ಬರೂ ಸೇರಿ ದೂರುದಾರರಿಗೆ ಜಾತಿ ನಿಂದನೆ ಮಾಡಿ, ಅವಾಚ್ಯ ಶಬ್ದಗಳಿಂದ ನಿಂದಿಸಿ, ಹಲ್ಲೆ ಮಾಡಿ, ಮನೆಯ ಮೇಲೆ ಕಲ್ಲನ್ನು ಹಾಕಿ ಕೊಲೆ ಮಾಡಲು ಪ್ರಯತ್ನಿಸಿದ್ದು, ಈ ವಿಷಯದ ಬಗ್ಗೆ ಕೆ.ಆರ್.ಪುರಂ ಪೊಲೀಸ್ ಠಾಣೆಗೆ ತಿಳಿಸಿದ್ದು, ಶ್ರೀ ಮಾರುತಿ, ಕೆ.ಆರ್.ಪುರಂ ಪೊಲೀಸ್ ಠಾಣೆಯ ಸಿಬ್ಬಂದಿಯವರು ಶ್ರೀ ಮಂಜು ಮತ್ತು ಶ್ರೀಮತಿ ಅನಿತ ರವರೊಂದಿಗೆ ಕೈ ಜೋಡಿಸಿ, ದೂರುದಾರರ ದೂರರ್ಜಿಯ ಮೇಲೆ ಯಾವುದೇ ಕ್ರಮ ಕೈಗೊಳ್ಳದೇ, ಮೂಲ ಬಾಡಿಗೆ ಒಪ್ಪಂದ ಪತ್ರವನ್ನು ತೆಗೆದುಕೊಂಡಿದ್ದು, ದೂರುದಾರರು ಬಾಡಿಗೆ ಪತ್ರವನ್ನು ಕೇಳಿದಕ್ಕೆ ಶ್ರೀ ಮಾರುತಿ, ಪೊಲೀಸ್ ಸಿಬ್ಬಂದಿಯವರು ದೂರುದಾರರನ್ನು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆಂದು ದೂರುದಾರರು ಅವರ ದೂರರ್ಜಿಯಲ್ಲಿ ಆಪಾದನೆ ಮಾಡಿರುತ್ತಾರೆ.

3. ಸದರಿ ದೂರಿನ ಪ್ರತಿಯನ್ನು ಉಪ ಪೊಲೀಸ್ ಆಯುಕ್ತರು, ಪೂರ್ವ ವಿಭಾಗ, ಬೆಂಗಳೂರು ಇವರಿಗೆ ಸೂಕ್ತ ತನಿಖೆ ಮಾಡಿ ವರದಿಯನ್ನು ಸಲ್ಲಿಸುವಂತೆ ಕಳುಹಿಸಿದ್ದು, ಅದರಂತೆ ಸಹಾಯಕ ಪೊಲೀಸ್ ಆಯುಕ್ತರು, ವೈಟ್ ಫೀಲ್ಡ್ ಉಪ-ವಿಭಾಗ, ಬೆಂಗಳೂರು ನಗರ ರವರು ಅವರ ವರದಿಯೊಂದಿಗೆ ಪೊಲೀಸ್ ಇನ್ಸ್‌ಪೆಕ್ಟರ್, ಕೆ.ಆರ್.ಪುರಂ ಪೊಲೀಸ್ ಠಾಣೆ, ಬೆಂಗಳೂರು ರವರ ವರದಿ ಹಾಗೂ ಪ್ರಕರಣಕ್ಕೆ ಸಂಬಂಧಪಟ್ಟ ಇತರೆ ದಾಖಲೆಗಳನ್ನು ಆಯೋಗಕ್ಕೆ ಸಲ್ಲಿಸಿರುತ್ತಾರೆ.

4. ಸದರಿಯವರ ವರದಿಯಲ್ಲಿ, ದೂರರ್ಜಿಗೆ ಸಂಬಂಧಪಟ್ಟಂತೆ ಎದುರಾಳಿಗಳಾದ ಶ್ರೀ ಮಂಜುನಾಥ ಮತ್ತು ಶ್ರೀಮತಿ ಅನಿತ ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದು, ದೂರುದಾರರಾದ ಶ್ರೀ ಎಂ.ಕೆ.ಮುನಿಯಪ್ಪ ರವರಿಗೆ ವಿಚಾರಣೆಗೆ ಹಾಜರಾಗುವಂತೆ ಪೊಲೀಸ್ ನೋಟೀಸ್‌ಗಳನ್ನು ಜಾರಿ ಮಾಡಿ, ಅನೇಕ ಬಾರಿ ದೂರವಾಣಿ ಕರೆ ಮಾಡಿ ವಿಚಾರಣೆಗೆ ಹಾಜರಾಗಲು ಕೋರಿ ಪೊಲೀಸ್ ನೋಟೀಸ್‌ಗಳನ್ನು ಜಾರಿ ಮಾಡಿದಾಗ್ಯೂ ಅಲ್ಲದೇ ಅನೇಕ ಬಾರಿ ದೂರವಾಣಿ ಕರೆ ಮಾಡಿ ವಿಚಾರಣೆಗೆ ಹಾಜರಾಗುವಂತೆ ಹಾಗೂ ಎದುರಾಳಿಗಳ ವಿರುದ್ಧ ದೂರು ನೀಡುವುದಿದ್ದಲ್ಲಿ ಲಿಖಿತ ರೂಪದಲ್ಲಿ ಕೊಡುವಂತೆ ತಿಳಿಸಿದ್ದರೂ ಸಹ ಸದರಿಯವರು ಇದುವರೆಗೆ ವಿಚಾರಣೆಗಾಗಲೀ, ಎದುರಾಳಿಗಳ ವಿರುದ್ಧ ಲಿಖಿತ ರೀತಿಯ ದೂರುಗಳನ್ನಾಗಲೀ, ದಾಖಲಾತಿಗಳನ್ನಾಗಲೀ ನೀಡಲು ಸಹ ಠಾಣೆಗೆ ಬಂದಿರುವುದಿಲ್ಲವೆಂದು ವರದಿ ಮಾಡಿರುತ್ತಾರೆ. ಮುಂದುವರೆದು, ದೂರುದಾರರಾದ ಶ್ರೀ ಎಂ.ಕೆ.ಮುನಿಯಪ್ಪ ರವರಿಗೆ ದೂರು ಅರ್ಜಿಯಲ್ಲಿ ಉಲ್ಲೇಖಿಸಿರುವ ತಮ್ಮ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ಸಾಕಷ್ಟು ಅವಕಾಶಗಳನ್ನು ನೀಡಿದ್ದರೂ ಸಹ ಅವರು ವಿಚಾರಣೆಗೆ ಹಾಜರಾಗದೇ ಸಕಾರಾತ್ಮಕವಾಗಿ ಸ್ಪಂದಿಸಿಲ್ಲವೆಂದು ವರದಿ ಮಾಡಿರುತ್ತಾರೆ.

5. ಸದರಿ ವರದಿಯ ಪ್ರತಿಯನ್ನು ದೂರುದಾರರ ಅಭಿಪ್ರಾಯಕ್ಕಾಗಿ ಕಳುಹಿಸಿದ್ದು, ದೂರುದಾರರು ಅವರ ಅಭಿಪ್ರಾಯವನ್ನು ದಿನಾಂಕ 15/02/2021ರ ಪತ್ರದೊಂದಿಗೆ ಇತರೆ ದಾಖಲಾತಿಗಳನ್ನು ಹಾಗೂ ಸಿ.ಡಿ ಯನ್ನು ಸಲ್ಲಿಸಿರುತ್ತಾರೆ. ದೂರುದಾರರು ಅವರ ಅಭಿಪ್ರಾಯದಲ್ಲಿ, ದೂರುದಾರರು ಹಿರಿಯ ನಾಗರೀಕರಾಗಿದ್ದು, ಬಾಡಿಗೆದಾರರಾದ ಶ್ರೀ ಮಂಜುನಾಥ್ ಹಾಗೂ ಶ್ರೀಮತಿ ಅನಿತ ರವರು ನವೆಂಬರ್, 2019 ರಿಂದ ಇದುವರೆಗೂ ಬಾಡಿಗೆ ಹಣ ಕೊಡದೇ, ದೂರುದಾರರನ್ನು ಅವಾಚ್ಯ ಶಬ್ದಗಳಿಂದ ಬೈದು, ಜಾತಿ

ನಿಂದನೆ ಮಾಡಿ, ಪ್ರಾಣ ಬೆದರಿಕೆ ಹಾಕಿದ್ದು, ಆಗಸ್ಟ್ 2020 ರಂದು ಕಲ್ಲಿನಿಂದ ಬಾಡಿಗೆ ಮನೆಯ ಬಾಗಿಲನ್ನು ಒಡೆದು ಹಾನಿ ಮಾಡಿದ್ದು, ಹಾಗೂ ಶ್ರೀ ಮಾರುತಿ ಎಸ್. ನಾಟಿಕರ್, ಹೆಚ್.ಸಿ6999 ರವರಿಗೆ ಹಣ ನೀಡಿ ದೂರುದಾರರನ್ನು ಬೈಯುವಂತೆ ಮಾಡಿ ಅವರಲ್ಲಿದ್ದ ಮೂಲ ಬಾಡಿಗೆ ಒಪ್ಪಂದ (Original Rent Agreement) ಪತ್ರವನ್ನು ದೂರುದಾರರಿಂದ ಮಾರುತಿ ರವರು ಕಸಿದು ಅವರ ಬಳಿಯೇ ಇರಿಸಿಕೊಂಡಿದ್ದು, ಶ್ರೀ ಮಂಜುನಾಥ್, ಎಸ್.ಐ ರವರು ದೂರುದಾರರಿಗೆ ವಯಸ್ಸಾಗಿದೆ ಎಂದು ನೋಡದೆ ಠಾಣೆಗೆ ಹೋದಾಗಲೆಲ್ಲ ಬೆಳಿಗ್ಗೆಯಿಂದ ಸಂಜೆಯವರೆಗೂ ಕಾಯಿಸಿ, ಯಾವುದೇ ವಿಚಾರಣೆ ಮಾಡದೇ ಇದ್ದು, ಎ.ಸಿ.ಪಿ ರವರು ದೂರುದಾರರಿಗೆ ಖಾಲಿ ಎನ್ವೆಲಪ್ (Envelop) ಕಳುಹಿಸಿ, ದೂರುದಾರರೇ ವಿಚಾರಣೆಗೆ ಹಾಜರಿಲ್ಲವೆಂದು ಹೇಳಿ, ಎ.ಸಿ.ಪಿ ರವರ ವರದಿಯಲ್ಲಿ ದೂರುದಾರರ ಮೇಲೆ ಇಲ್ಲ-ಸಲ್ಲದ ಆರೋಪಗಳನ್ನು ಮಾಡಿ ಅವರ ಮಾನವ ಹಕ್ಕು ಉಲ್ಲಂಘನೆ ಮಾಡಿರುತ್ತಾರೆಂದು ಹೇಳಿರುತ್ತಾರೆ. ಮುಂದುವರೆದು, ದೂರುದಾರರಿಗೆ ಬರಬೇಕಾದ ಬಾಡಿಗೆ ಹಣ ಹಾಗೂ ಬಾಗಿಲನ್ನು ಒಡೆದು ಮನೆ ಬಾಗಿಲನ್ನು ಹಾನಿ ಮಾಡಿದ್ದಕ್ಕೆ ಶ್ರೀ ಮಂಜುನಾಥ್ ಹಾಗೂ ಶ್ರೀಮತಿ ಅನಿತ (ಬಾಡಿಗೆದಾರರು) ರವರಿಂದ ಪರಿಹಾರ ಹಣವನ್ನು ಹಾಗೂ ಕೆ.ಆರ್.ಪುರಂ ಪೊಲೀಸರಾದ ಮಂಜುನಾಥ್ ಹಾಗೂ ಮಾರುತಿ ಎಸ್. ನಾಟಿಕರ್ ರವರ ಮೇಲೆ ಕಾನೂನು ಕ್ರಮ ಜರುಗಿಸಬೇಕಾಗಿ ಹಾಗೂ ಈ ಘಟನೆಗಳಿಂದ ನೊಂದಿರುವ ದೂರುದಾರರಿಗೆ ಕಾನೂನು ನೆರವು ಹಾಗೂ ರಕ್ಷಣೆ ನೀಡಬೇಕೆಂದು ಅವರ ಅಭಿಪ್ರಾಯದಲ್ಲಿ ಪ್ರಾರ್ಥಿಸಿರುತ್ತಾರೆ.

6. ತದನಂತರ, ದಿನಾಂಕ 23/02/2021 ರಂದು ದೂರುದಾರರು ಆಯೋಗದ ಮುಂದೆ ಖುದ್ದು ಹಾಜರಾಗಿದ್ದು, ಅವರನ್ನು ವಿಚಾರಣೆ ಮಾಡಲಾಗಿರುತ್ತದೆ.

7. ಮುಂದುವರೆದು, ಕಡತವನ್ನು ಪರಿಶೀಲಿಸಿದ ನಂತರ, ಎದುರುದಾರರು (ಬಾಡಿಗೆದಾರರು) ನೀಡಬೇಕಾದ ಬಾಡಿಗೆ ಹಣದ ವಿಷಯವು ಸಿವಿಲ್ ಸ್ವರೂಪವಾಗಿರುವುದರಿಂದ, ಸಂಬಂಧಪಟ್ಟ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿ, ಬಗೆಹರಿಸಿಕೊಳ್ಳುವಂತೆ ದೂರುದಾರರಿಗೆ ಈ ಮೂಲಕ ಸೂಚಿಸುವುದು. ಮುಂದುವರೆದು, ದೂರುದಾರರ ಮೇಲೆ ಜಾತಿ ನಿಂದನೆ ಮತ್ತು ಹಲ್ಲೆ ಮಾಡಲಾದ ಬಗ್ಗೆ ಕೆ. ಆರ್. ಪುರಂ

ಪೊಲೀಸ್ ಠಾಣೆಯಲ್ಲಿ ಯಾವುದೇ ಪ್ರಕರಣ ದಾಖಲಾಗಿರುವುದು ಕಂಡು ಬರದ ಕಾರಣ, ಎದುರುದಾರರಾದ ಶ್ರೀ ಮಂಜುನಾಥ್ ಮತ್ತು ಶ್ರೀಮತಿ ಅನಿತ ರವರ ವಿರುದ್ಧ ಪ್ರಕರಣವನ್ನು (ಎಫ್.ಐ.ಆರ್) ದಾಖಲಿಸಲು ಹಾಗೂ ಠಾಣೆಗೆ ಬರುವ ಸಾರ್ವಜನಿಕರೊಂದಿಗೆ ಸೂಕ್ತ ರೀತಿಯಲ್ಲಿ ಸ್ಪಂದಿಸಲು ಪೊಲೀಸ್ ಇನ್ಸ್‌ಪೆಕ್ಟರ್, ಕೆ.ಆರ್.ಪುರಂ ಪೊಲೀಸ್ ಠಾಣೆ, ಬೆಂಗಳೂರು ರವರಿಗೆ ನಿರ್ದೇಶನ ನೀಡುವಂತೆ ಉಪ ಪೊಲೀಸ್ ಆಯುಕ್ತರು, ಪೂರ್ವ ವಿಭಾಗ, ಬೆಂಗಳೂರು ಇವರಿಗೆ ಶಿಫಾರಸ್ಸು ಮಾಡಿ, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕೈಗೊಂಡ ಕ್ರಮದ ಬಗ್ಗೆ ಅನುಪಾಲನಾ ವರದಿಯನ್ನು ದಿನಾಂಕ 20/04/2021 ರ ಒಳಗಾಗಿ ಆಯೋಗಕ್ಕೆ ಸಲ್ಲಿಸುವಂತೆ ಆದೇಶಿಸುತ್ತಾ, ಈ ಪ್ರಕರಣವನ್ನು ಮುಕ್ತಾಯಗೊಳಿಸಲಾಗಿದೆ.

8. ಅನುಪಾಲನಾ ವರದಿಗಾಗಿ ದಿನಾಂಕ 20/05/2021 ರಂದು ಮಂಡಿಸುವುದು.

**ಸಹಿ/-**
**(ಕೆ. ಬಿ. ಚಂಗಪ್ಪ)**
**ಸದಸ್ಯರು**

ಎನ್.ಪಿ.ಆರ್